Doc-17
1-P-2

(1)

« No KRNN 12 ೯ 7-2-1975

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★
58 th Year
ನೇ ವರ್ಷ

ಸತ್ಯವಾದಿ
SATYAVADI

Golden Jubilee
Celebrated Paper
Satyavadi Daily
Mysore 4
– For Influential Publicity –

ಸ್ಥಾಪಕರು: ಅರಮನೆ ಸಿರಸ್ತೆದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಶ್ರೀ ಸಾರಥಿರತ ಎಂ. ಎಸ್. ಕೃಷ್ಣರಾವ್ 3 ಪೈಸೆ

ಉತ್ತರ ಪ್ರದೇಶದಲ್ಲಿ ವಿದ್ಯಾರ್ಥಿಗಳ ಬೆದರಿಕೆ

ಅನೇಕಕಡೆ ಜನತಾ ಬಜಾರುಗಳು

ಕೊಚ್ಚಿ — ಸೂಪರ್ ಬಜಾರುಗಳ ಮಾದರಿಯಲ್ಲಿ 50000 ಅಥವಾ ಅದಕ್ಕೆ ಹೆಚ್ಚು ಜನಸಂಖ್ಯೆಯ ಪಟ್ಟಣಗಳಲ್ಲಿ ಜನತಾ ಬಜಾರುಗಳನ್ನು ಸ್ಥಾಪಿಸಲು ಕೇಂದ್ರ ಯೋಜಿಸಿದೆ ಎಂದು ಕೇಂದ್ರ ಮಂತ್ರಿ ಶ್ರೀ ಶ್ರೀ ಜಾರ್ಜ್ ಹೇಳಿದರು.

C P R II 7/73–74

City Municipal Offices,
Mysore, dated 29–1–75

ABSTRACT TENDER

NOTIFICATION

Tender for supply of Steel Almirah's for the use of this office.

Notice is hereby given that sealed tender will be received by the undersigned at the Municipal Office upto 4 P. M. on or before 17–2–75 for supply of Steel Almirah's for the use of this office (Size 66" x 33" x 19")

Each tender must be accompanied by a certified challan for having credited Rs. 300/– o the Extension Counter, State Bank of Mysore City Municipal Office, Mysore.

Particulars

Steel Almirah's 12 No's

(sd) S. Swatantra Rao,
Municipal Commissioner,
C M C. Mysore.

ಸರ್ಕಾರಕ್ಕೆ ಎಚ್ಚರಿಕೆ

ಸರ್ಕಾರವು ಶ್ರೀ ಜಯಪ್ರಕಾಶ ನಾರಾಯಣರನ್ನು ದಸ್ತಗಿರಿ ಮಾಡಲು ಸಾಹಸ ಪಟ್ಟರೆ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಶಕ್ತಿಯುತ ಚಳುವಳಿ ಹೂಡುವರೆಂದು ವಿದ್ಯಾರ್ಥಿ ಪ್ರತಿನಿಧಿಗಳ ಸಂಘರ್ಷ ಸಮಿತಿಯು ಪೂನಾದಲ್ಲಿ ಸಭೆ ನಡೆಸಿ ಸರಕಾರಕ್ಕೆ ಎಚ್ಚರಿಸಿದೆ.

●

ಗಿರವಿ ಅಂಗಡಿ ಮೇಲೆ ದಾಳಿ

ಮೈಸೂರು ಅಶೋಕ ರಸ್ತೆಯಲ್ಲಿ ಗಿರವಿ ಅಂಗಡಿಯೊಂದರ ಮೇಲೆ ದಾಳಿ ಮಾಡಿ ಅಬ್ಬಾರಿ ಇಲಾಖೆಯವರು 1 ಲಕ್ಷ 11 ಸಹಸ್ರ ರೂಪಾಯಿಗಳ ಬೆಲೆಯ ಚಿನ್ನ, ಆಭರಣಗಳನ್ನು ವಶಪಡಿಸಿಕೊಂಡರು.

●

ಭೂತದ ಸಹಾಯ

ದಕ್ಷಿಣ ಕನ್ನಡ ಭೂ ನ್ಯಾಲೀಕರು ಭೂ ಸುಧಾರಣೆಗೆ ಪತಂಕ ಮಾಡಲು ತಾವು ಪೂಜಿಸುವ ಭೂತಗಳ ಸಹಾಯದಿಂದ ಹಿಡುವಳಿದಾರರನ್ನು ಬೆದರಿಸಿ ಭೂಮಿ ಬಿಟ್ಟು ಹೋಗುವಂತೆ ಮಾಡುತ್ತಿರುವರು ಭೂತದ ಹಾವಳಿ ಹೇಗೆ ಪರಿಹರಿಸುವುದೂ ಎಂಬ ವಿಚಾರದಲ್ಲಿ ಸರ್ಕಾರ ಕಳವಳವಾಗಿದೆ.

●

ಕೇಳಿಕೆ ಕೆಡಿನೇಗಲು ಪೊರವಣಿಗೆ

ಬಿಜಾಪುರ– ಪಟ್ಟಣದಲ್ಲಿ ಅನೌಪಚಾರಿಕೆ ಪಡಿತರ ಜಾರಿಗೆ ಒತ್ತಾಯಿಸ್ಲಾ. ಪ ಹಿರಂಗ ಮಾರುಕಟ್ಟೆಯಲ್ಲಿ ಆಹಾರಧಾನ್ಯ ಬೆಲೆ ಇಳಿಸಲು, ಮಹಿಳೆಯರೇ ಹೆಚ್ಚಾಗಿದ್ದ ಭಾರಿ ಮೆರವಣಿಗೆಯು ಜಿಲ್ಲಾಧಿಕಾರಿಗಳ ನಿವಾಸಕ್ಕೆ ಹೋಗಿ ಮನವಿ ಅರ್ಪಿಸಿತು

★

ಸಕ್ಕರೆ ಬೆಲೆ ಇಳಿಕೆ

ಒಂದು ವಾರದ ಹಿಂದೆ ಕ್ವಿಂಟಾಲಿಗೆ ರೂ 454 ಇದ್ದ ಸಕ್ಕರೆ ಬೆಲೆ ರೂ 416 ಕ್ಕೆ ಇಳಿದಿದೆ ಎಂದು ಬೊಂಬಾಯಿ ವಾರ್ತೆ

ಅಧಿಕಾರಿಗಳ ಮೇಲೆ ತಪ್ಪು

ನಾಗಾರ್ಜುನ ಸಾಗರ ಬಲದಂಡೆ ನಾಲೆ ಕಂಟ್ರಾಕ್ಟು ಸಂಬಂಧದಲ್ಲಿ ವಿಚಾರಣೆ ನಡೆಸಿದ ಏಕ ಸದಸ್ಯ ಆಯೋಗವು ನಾಲ್ಕು ಉನ್ನತ ಮಟ್ಟದ ಅಧಿಕಾರಿಗಳ ಮೇಲೆ ತಪ್ಪನ್ನು ಹೊರಿಸಿವೆ ಎಂದು ವೃದಂತಾಪತ್ರ ವಾರ್ತೆ ತಿಳಿಸುತ್ತದೆ.

●

ವಿಫಲವಾದೀತು

ತಮ್ಮನ್ನು ಅಧಿಕಾರದಿಂದ ತೆಗೆದುಹಾಕುವ ಪ್ರಯತ್ನಗಳು ವಿಫಲವಾಗುವದಾಗಿ ಮುಖ್ಯಮಂತ್ರಿ ಶ್ರೀ ಡಿ ದೇವರಾಜ ಅರಸ್ ರವರು ಬೆಳಗಾಂನಲ್ಲಿ ಕಾಂಗ್ರೆಸಿಗರ ಸಮ್ಮೇಳನದಲ್ಲಿ ತಿಳಿಸಿದರು.

●

ನೌಕರರ ಬಂಧನ

ನಾನ್ ಗೆಜಿಟೆಡ್ ನೌಕರರ ಮುಷ್ಕರ ಅಪೂರ್ಣವಾಗಿತ್ತೆಂದು ತಿರುವೇಂದ್ರಂ ವರದಿ ತಿಳಿಸುತ್ತದೆ ಭಾರತ ರಕ್ಷಣಾ ಶಾಸನ ಪ್ರಕಾರ 500 ಸರ್ಕಾರಿ ನೌಕರರ ಬಂಧನವಾಗಿದೆ.

●

ನ್ಯಾಯಾಧೀಶರ ಮುಷ್ಕರ

ತಮ್ಮ ವೇತನ ಹೆಚ್ಚಿಸಬೇಕೆಂದು ಅಲ್ಲಿ ಇತಿಹಾಸದಲ್ಲೇ ಪ್ರಪ್ರಥಮವಾಗಿ ಇಟಲಿ ನ್ಯಾಯಾಧೀಶರು 48 ಗಂಟೆಗಳ ಮುಷ್ಕರ ಆಚರಿಸಿದರು.

●

ಆದಿ ಶಂಕರಾಚಾರ್ಯರು

ಮೈಸೂರು— ಡಾ || ಬಿ. ಜಿ. ದಾಸ್ ರವರು ಸರ್ವಭಾಷಾ ಸರಸ್ವತಿ ಸಂಘದಲ್ಲಿ ಆದಿ ಶಂಕರಾಚಾರ ಬಗ್ಗೆ ಆ ಮೋ ಘೆ ಭಾಷಣ ಮಾಡಿದರು.

ವಿಶ್ವಯುದ್ಧಕ್ಕೆ ಚೀಣ ಸಿದ್ಧವಾಗುತ್ತಿದೆಯೆಂದು ರಷ್ಯದ ಪ್ರಾವ್ದಾ ಬರೆದಿದೆ.

ವಿದ್ಯಾರ್ಥಿಗಳ ಬೆದರಿಕೆ

ಉತ್ತರ ಪ್ರದೇಶದಲ್ಲಿ ವಿದ್ಯಾರ್ಥಿಗಳ ಗಲಾಟೆ ಪ್ರಾರಂಭವಾಗಿದೆ ಅಲಹಾಬಾದ್ ವಿಶ್ವವಿದ್ಯಾನಿಲಯ ಮತ್ತು ಇತರ ಕಾಲೇಜುಗಳನ್ನು ವಿದ್ಯಾರ್ಥಿಗಳು ಬಲವಂತದಿಂದ ಮುಚ್ಚಿಸಿ, ಜಿಲ್ಲಾಧಿಕಾರಿಗಳಲ್ಲಿ ಮೆರವಣಿಗೆ ಹೋಗಿ, ಆಂತರಿಕ ರಕ್ಷಣಾ ಕಾನೂನಿನ ಪ್ರಕಾರ ಬಂಧಿತರಾಗಿರುವ 5 ವಿದ್ಯಾರ್ಥಿಗಳನ್ನು 24 ಗಂಟೆಗಳಲ್ಲಿ ಬಿಡುಗಡೆ ಮಾಡದಿದ್ದರೆ ಜೀವಿತವನ್ನು ತಳಮಳಗೊಳಿಸಲಾಗುವದೆಂದು ಕಟ್ಟಕಡೆ ಸೂಚನೆ ಇತ್ತರು ವಾರಣಾಸಿಯಲ್ಲಿ 8 ನೇ ತಾ|| ನಡೆಯಲಿರುವ ಕಾಂಗ್ರೆಸ್ ಮೇಳ ವಿರುದ್ಧ ಮೇಳ ನಡೆಸುವುದಾಗಿ ಬೆದರಿಕೆ ಹಾಕಿರುವರು ಪ್ರಧಾನಿ ಇಂದಿರಾರವರು ಮತ್ತು ಕಾಂಗ್ರೆಸ್ ಅಧ್ಯಕ್ಷ ಬರೂವಾರವರು ಭಾಷಣ ಮಾಡಲಿರುವ ಕಾಂಗ್ರೆಸ್ ಮೇಳವನ್ನು ಅಡ್ಡಿಪಡಿಸಲು ವಿದ್ಯಾರ್ಥಿಗಳು ನಿರ್ಧರಿಸಿರುವರು. ಅಲಿಘಡದಲ್ಲಿ, ದೆಹಲಿಯಲ್ಲಿ ನಡೆದ ಜುವಕರ ಮಸೀದಿ ಘಟನೆ ಕುರಿತು ತೀವ್ರ ಪ್ರತಿಭಟಿಸಿದರು.

1500 ಪ್ರತಿನಿಧಿಗಳು

ಈ ತಿಂಗಳು 8 ನೇ ತಾ. ನಿಂದ ಮೈಸೂರಿನಲ್ಲಿ ನಡೆಯುವ ರೋಟರಿ ಜಿಲ್ಲ 31 ರ ಸಮ್ಮೇಳನದಲ್ಲಿ 1500 ಪ್ರತಿನಿಧಿಗಳು ಬರುವರೆಂದು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಲಾಯಿತು.

ಜೆ ಪಿ ಯವರ ಮೇಳನ

ಪಾಟ್ನಾ— ಪ್ರಸ್ತುತ ಚಳವಳಿಯಲ್ಲಿ ಭಾಗವಹಿಸುತ್ತಿರುವ ಕಾರ್ಯಕರ್ತರ ಮೇಳನವು ಜಯಪ್ರಕಾಶನಾರಾಯಣರ ನೇತೃತ್ವದಲ್ಲಿ ತಾ|| 18 ರಂದು ಗಾಂಧಿ ಮೈದಾನದಲ್ಲಿ ನಡೆಯುವುದು – ಮೇಳನ ನಂತರ ಅದೇ ದಿನ ಏ ಐ ಆರ್ ಮುಂದೆ ಪ್ರದರ್ಶನ ನಡೆಸಲಾಗುವುದು.

★ ಮಹಾರಾಷ್ಟ್ರ ಕರ್ನಾಟಕ ಗಡಿ ವ್ಯವಸ್ಥೆ ಬಗ್ಗೆ ಮಹಾರಾಷ್ಟ್ರ ಏಕೀಕರಣ ಸಮಿತಿ ಪ್ರದರ್ಶನಕ್ಕೆ 20 ರಂದು ಸಂಪರ್ಕ ಭವನಕ್ಕೆ ಸಾವಿರ ಮಂದಿಯನ್ನು ಕಳಿಸುತ್ತದೆ.

(2)

ಮುನಿಸಿಪಲ್ ಕಮಿಷನರವರ ಎಚ್ಚರಿಕೆ

ಮೈಸೂರು– ಒಳಚರಂಡಿ ನೀರನ್ನು ನ್ಯಾಯಬಾಹಿರವಾಗಿ ವಿಳ್ಳೇದೆಲೆ ಮತ್ತು ತರಕಾರಿ ಬೆಳೆಯುವವರು ದುರುಪಯೋಗಪಡಿಸಿಕೊಳ್ಳುತ್ತಿರುವ ಬಗ್ಗೆ ಮುನಿಸಿಪಲ್ ಕಮಿಷನರ್ ಶ್ರೀ ಸ್ವತಂತ್ರರಾವ್‌ರವರು ತೀವ್ರ ಎಚ್ಚರಿಕೆ ನೀಡಿರುವರು

ಒಳ್ಳೇ ಸರಕಾರವಿರಬೇಕು

ಮದರಾಸು— ಹಳೇ ಕಾಂಗ್ರೆಸ್ ನಾಯಕ ಶ್ರೀ ಕಾಮರಾಜ್‌ರವರು, ಬಹಿರಂಗ ಸಭೆಯಲ್ಲಿ ಮಾಡಿದ ಭಾಷಣದಲ್ಲಿ, ಯಾವ ಪಕ್ಷ ಅಧಿಕಾರಕ್ಕೆ ಬಂದರೂ ಒಳ್ಳೇ ಸರಕಾರವಿರಬೇಕೆಂದು ಹೇಳಿದರು.

ಜೆ ಪಿ ಚಳವಳಿ

ಶಿವಮೊಗ್ಗ— ಚನ್ನಗಿರಿ ತಾಲ್ಲೂಕಿನ ತಾನಸಂಘರ್ಷಣ ಸಮಿತಿ ಆಶ್ರಯದಲ್ಲಿ ನಡೆದ ಭಾರಿ ಬಹಿರಂಗ ಸಭೆಯಲ್ಲಿ, ಆ ತಾಲ್ಲೂಕಿನಲ್ಲಿ ಬೀಹಾರು ಮಾದರಿ ಚಳುವಳಿ ಹೂಡಲು ನಿರ್ಧರಿಸಲಾಯಿತು.

ಪ್ರಜಾಹಿತ

ಹುಬ್ಬಳ್ಳಿ— ರೈತರು ಮತ್ತು ಸಾಧಾರಣ ಜನರೂ ತಮ್ಮ ಹೊಲ ಮತ್ತು ಮನೆ ಕಾಂಪೌಂಡಿನಲ್ಲಿ ಬೆಳೆಸುವ ಗಂಧದಮರದಲ್ಲಿ ಅದರ ಅರ್ಧ ಭಾಗವನ್ನು ಅವರಿಗೆ ಕೊಡಲು ಸರ್ಕಾರ ನಿರ್ಧರಿಸಿರುವುದಾಗಿ ತಿಳಿಸಲಾಗಿದೆ.

ಆರ್ ಎಸ್ ಎಸ್

ಮೈಸೂರು— ಆರ್ ಎಸ್ ಎಸ್ ಮೇಲೆ ಪ್ರತಿಬಂಧಕ ಹಾಕುವ ಕಾರ್ಯವನ್ನು ಬಲವಾಗಿ ವಿರೋಧಿಸಲಾಗುವದೆಂದು ಸಂಘದ ಕರ್ನಾಟಕ ರಾಜ್ಯ ಪ್ರಚಾರಕ ಶ್ರೀ ಹೆಚ್. ವಿ ಶೇಷಾದ್ರಿಯವರು ಹೇಳಿದರು.

Contribute Liberally

to the National Defence Fund

S H A K T I

S U D H A

A Superb Tonic

Quality Printing Neat Binding

Lakshminarasimha Press

Sivarampet, Mysore 1

ವುಡ್‌ಲಾಂಡ್ಸ್ 7 2 75 ರಿಂದ

ಅವೋಘ ಆರಂಭ

ದಿ ಚೇಟ್

ಅಪೂರ್ವ ಈಸ್ಟ್‌ಮನ್ ಕಲರ್ ಹಿಂದಿ ಕಲಾಕೃತಿ

ಪಾತ್ರ– ವಿನೋದ್ ಖನ್ನ ಮೌಸಮಿ ಚಟರ್ಜಿ ದಿನಕ್ಕೆ ೪ ಪ್ರದರ್ಶನಗಳು

ಅಪೇರಾ 7 2 75 ರಿಂದ

ಭಕ್ತ ಮಾರ್ಕಂಡೇಯ

ಅನೋಘ ಕನ್ನಡ ಚಿತ್ರ

ಪಾತ್ರ – ರಘುರಾಮಯ್ಯ ಸರಜೂ ಕಾರ್ ರಾಜು ದಿನ 3 ಪ್ರದರ್ಶನಗಳು

ಭೂತದಲ್ಲಿ ಗೋವಧೆ

ಪೂರ್ಣ ನಿಶ್ಶೇಧವಾಗಲಿ



Protect the Cow

Help The Gorakshana

—Humanitarian Propoganda Monthly....

Edited Printed and Published by Dharmapracharanirata M S. Krishna Rao (Proprietor) at the Satvavadi Press, Chamarajapuram Mysore